ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ

**Directorate of Medical Education.**

ಆನಂದರಾವ್ ವೃತ್ತ, ಬೆಂಗಳೂರು-9

Ananda Rao Circle, Bangalore-9

email: dmekarnataka@yahoo.com

ಸಂಖ್ಯೆ: ವೈಶಿನಿ/ಎನ್ಆರ್ಸಿ(1)/23/2018-19 ದಿನಾಂಕ: 14 -11-2018

## ಅರ್ಜಿ ಸಲ್ಲಿಸುವ ಅಭ್ಯರ್ಥಿಗಳಿಗೆ ಸೂಚನೆ

* * * * *

ಸರ್ಕಾರದ ಆದೇಶ ಸಂಖ್ಯೆ: ಆಕುಕ 381 ಎಂಎಸ್ಎಫ್ 2018, ದಿ: 05-11-2018ರ ಆದೇಶದಲ್ಲಿ 2018-19ನೇ ಸಾಲಿನಿಂದ ಸರ್ಕಾರಿ ಮತ್ತು ಖಾಸಗಿ ನರ್ಸಿಂಗ್ ಕಾಲೇಜುಗಳಲ್ಲಿನ ಸರ್ಕಾರಿ ಕೋಟಾದ ಸೀಟುಗಳಿಗೆ ಸೇವಾನಿರತ ಶುಶ್ರೂಷಕರನ್ನು ಸಹ ಪಿ.ಬಿ.ಬಿ.ಎಸ್ಸಿ. ನರ್ಸಿಂಗ್ ವ್ಯಾಸಾಂಗಕ್ಕೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಆಯ್ಕೆ ಪ್ರಕ್ರಿಯೆ ನಡೆಸಲು ಅನುಮತಿ ನೀಡಿ ಆದೇಶ ಹೊರಡಿಸಿದ್ದು, ಅದರಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ವೈದ್ಯಕೀಯ ಶಿಕ್ಷಣ ಇಲಾಖೆಯ ಸೇವಾನಿರತ ಶುಶ್ರೂಷಕರುಗಳಿಗೆ ಅರ್ಜಿ ಸಲ್ಲಿಸಲು 07 ದಿನಗಳ ಕಾಲ ಕಾಲಾವಾಕಾಶ ನೀಡುವಂತೆ ಸೂಚಿಸಲಾಗಿರುತ್ತದೆ.

ಆದುದರಿಂದ 2018-19ನೇ ಸಾಲಿನ ಪಿ.ಬಿ.ಬಿ.ಎಸ್ಸಿ. ನರ್ಸಿಂಗ್ ವ್ಯಾಸಂಗಕ್ಕೆ ಸರ್ಕಾರಿ ಮತ್ತು ಖಾಸಗಿ ನರ್ಸಿಂಗ್ ಕಾಲೇಜುಗಳಲ್ಲಿನ ಸರ್ಕಾರಿ ಕೋಟಾದ ಸೀಟುಗಳಿಗೆ ಸೇವಾನಿರತ ಶುಶ್ರೂಷಕರುಗಳು ಅರ್ಜಿ ಸಲ್ಲಿಸುವ ದಿನಾಂಕವನ್ನು ಈ ಕೆಳಗಿನಂತೆ ವಿಸ್ತರಿಸಿದೆ.

1. ಅರ್ಜಿ ಪಡೆಯುವ ದಿನಾಂಕ: 15-11-2018 ರಿಂದ 22-11-2018ರ ವರೆಗೆ
2. ಭರ್ತಿ ಮಾಡಿದ ಅರ್ಜಿ ಸಲಿಸಲು ಕೊನೆಯ ದಿನಾಂಕ : 24-11-2018
3. ಅರ್ಜಿ ಮತ್ತು ಹೆಚ್ಚಿನ ವಿವರಗಳಿಗೆ ಈ ಮುಂದಿನ ವೆಬ್‌ಸೈಟ್ ಸಂಪರ್ಕಿಸುವುದು : www.bmcri.org
4. ಈ ನಿರ್ದೇಶನಾಲಯದ ಅಧಿಸೂಚನೆ ದಿನಾಂಕ : 27-07-2018ರ ಅಧಿಸೂಚನೆಯಲ್ಲಿನ ನಿಬಂಧನೆಗಳಲ್ಲಿ ಯಾವುದೇ ಬದಲಾವಣೆಗಳಿರುವುದಿಲ್ಲ.

ನಿರ್ದೇಶಕರು, ವೈದ್ಯಕೀಯ ಶಿಕ್ಷಣ